(ಶ್ರೀ ಎಂ. ನಾಗಪ್ಪ)

ರೂಲಿಂಗ್ ಕೊಟ್ಟರೆ ಯಾವ ವಿಧವಾದ ತೊಂದರೆಯೂ ಆಗಲಿಕ್ಕಿಲ್ಲ. ಈ ಮಾನ್ಯ ಸಭೆಗೆ ರೂಲಿಂಗ್ ಬೇಕಾಗಿದೆ. ಶ್ರೀಮಾನ್ ನಂಜೇಗೌಡರು ವಾಪಸ್ಸು ತೆಗೆದುಕೊಳ್ಳುತ್ತೇವೆ ಎಂದು ಹೇಳಿದರು. ಇಂಥ ಪರಿಸ್ಥಿತಿಯಲ್ಲಿ ಸರ್ಕಾರಕ್ಕೂ ವಿರೋಧಿಸಬೇಕಾದ ಪರಿಸ್ಥಿತಿ ಬರುತ್ತದೆ. ಈ ಮಾನ್ಯಸಭೆಗೆ ನಿರ್ಣಯ ಬೇಕೇ ಬೇಕು. ಪ್ರತಿಸಾರಿ ಹೈಕೋರ್ಟ್ ರೂಲಿಂಗ್ಸ್ ತಂದು ವಾದವಿವಾದ ಮಾಡುವುದಕ್ಕಿಂತ ತಾವು ಗೈಡ್‌ಲೈನ್ಸ್ ಹಾಕಿ ಇಂತಿಂಥ ಪರಿಸ್ಥಿತಿಯಲ್ಲಿ ಹೈಕೋರ್ಟ್‌ರೂಲಿಂಗ್ಸ್ ರೆಫರ್ ಮಾಡಿ ಎಂದು ಹೇಳಿ ಮಾನ್ಯ ಮಂತ್ರಿಗಳು ರೂಲಿಂಗ್ ಕೊಟ್ಟಿದ್ದಾರೆ ಎಂದು ಹೇಳಿದರು ನಾನು ಕೋರ್ಟ್ ಮಾಡಿದ್ದು ಅಪ್ರೊಪ್ರಿಯೇಟ್ ರೂಲಿಂಗ್ ಇದೆ, ನನ್ನ ಕೇಳು ಅಪ್ಲೈ ಆಗುತ್ತದೆ. ವಾಪಸ್ಸು ತೆಗೆದುಕೊಳ್ಳಿ ಎಂದು ಹೇಳಿದರೆ ವಾಪಸ್ಸು ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ದಯವಿಟ್ಟು ನಿರ್ಣಯ ಕೊಡಿ. ಇದು ಮುಂದಕ್ಕೆ ಸಹಾಯವಾಗುತ್ತದೆ.

Mr. SPEAKER.—I resume the ruling.

(v) Mysore University (Amendment) Bill, 1969

Motion to Consider

Mr. SPEAKER.—Now Hon. Member Sri L Srikantaiah may move his Bill, which was introduced on 28th March 1969.

Sri L. SRIKANTAIAH.—I beg to move :

"That the Mysore University (Amendment) Bill, 1969 be taken into consideration".

Mr. SPEAKER.—Motion moved :

"That the Mysore University (Amendment) Bill, 1969 to be taken for consideration".

†ಶ್ರೀ ಎಲ್. ಶ್ರೀಕಂಠಯ್ಯ.—ಸ್ವಾಮಿ, ಈ ಒಂದು ತಿದ್ದುಪಡಿ ಶಾಸನದ ಬಗ್ಗೆ ನಾನು ಕೆಲವು ಅಂಶಗಳನ್ನು ಸೂಕ್ಷ್ಮವಾಗಿ ಹೇಳುವುದಕ್ಕೆ ಪ್ರಯತ್ನಪಡುತ್ತೇನೆ. 1956ರ ಮೈಸೂರು ವಿಶ್ವವಿದ್ಯಾನಿಲಯದ ಶಾಸನದ ರೀತ್ಯಾ ಬೋರ್ಡ್ ಆಫ್ ಅಪಾಯಿಂಟ್‌ಮೆಂಟ್ಸ್ ಏನು ಮಾಡಿದ್ದಾರೆ ಅದರ ಸ್ವಭಾವ ಮತ್ತು ಅದರ ಅವಶ್ಯಕತೆ ಬಗ್ಗೆ ಮಾನ್ಯ ಸದಸ್ಯರು ಅರ್ಥ ಮಾಡಿಕೊಳ್ಳಬೇಕಾದರೆ ಅದರ ಹಿನ್ನಲೆಯನ್ನು ನಾನು ಈ ಮಾನ್ಯ ಸಭೆಗೆ ಸ್ವಲ್ಪ ಹೇಳಬೇಕಾಗಿದೆ.

1956ರ ಮುನ್ನ ಮೈ ಸೂರು ವಿಶ್ವವಿದ್ಯಾನಿಲಯದ ಸಂಬಂಧಪಟ್ಟಂತೆ ಒಂದು ಶಾಸನ ಇತ್ತು. 1956 ರಲ್ಲಿ ಇದು ತಿದ್ದುಪಡಿ ಆಗಿದೆ; ನನಗೆ ತಿಳಿದಮಟ್ಟಿಗೆ 1956ಕ್ಕೆ ಮುನ್ನ ಮೈಸೂರು ವಿಶ್ವವಿದ್ಯಾನಿಲಯದ ಆಂಗರಚನೆಯಲ್ಲಿ ಪ್ರಾಮುಖ್ಯವಾದ ಯೂನಿವರ್ಸಿಟಿ ಕೌನ್ಸಿಲ್ ಅಥವಾ ಸಿಂಡಿಕೇಟ್ ಇತ್ತು. ಈಗ ಇರುವ ಹಾಗೆ ಉಪಅಂಗವಾಗಿ ಯೂನಿವರ್ಸಿಟಿ ಕೌನ್ಸಿಲ್ ಮತ್ತು ಸೆನೆಟ್ ಭಾಗಗಳು ಇದ್ದವು. ಮುಖ್ಯವಾಗಿ ಅಧ್ಯಾಪಕ ವರ್ಗವನ್ನು ಮತ್ತು ಇತರರನ್ನು ನೇಮಕ ಮಾಡ ತಕ್ಕಂಥ ಪೂರ್ಣ ಅಧಿಕಾರ ಯೂನಿವರ್ಸಿಟಿ ಅಥವಾ ಸಿಂಡಿಕೇಟ್‌ಗೆ ಇತ್ತು. ಪದ್ಧತಿ ಹೇಗೆ ಇತ್ತು ಎಂದರೆ ಯಾವುದೊ ಒಂದು ಅಡ್ವೈಸರಿ ಬಾಡಿ ಮಾಡಿಕೊಂಡು ಅವರು ಕ್ಯಾಡಿಡೇಟ್ಸ್‌ನನ್ನು ಇಂಟರ್‌ವ್ಯೂ ಮಾಡಿ ಅವರ ರೆಕಮೆಂಡೇಷನ್ಸ್ ಸಿಂಡಿಕೇಟ್ ಅಥವಾ ಕೌನ್ಸಿಲ್‌ಗೆ ಬಂದರೆ, ಅವು ಸಿಂಡಿಕೇಟ್, ಥಾನ್ಸ್‌ಲರ ಒಪ್ಪಿಗೆ ಪಡೆದು ಅವರನ್ನು ಅಪಾಯಿಂಟ್ ಮಾಡತಕ್ಕಂಥ ಪದ್ಧತಿ ಇತ್ತು. ನೇರವಾಗಿ ಸರ್ಕಾರದವರೇ ಅಪಾಯಿಂಟ್ ಮಾಡುತ್ತಿದ್ದರು ಎಂದು ಹೇಳಬಹುದು. ಈ ಒಂದು ಕಾರ್ಯಾಚರಣೆಯಲ್ಲಿ ಬಹಳ ವಿಧವಾದ ದೋಷದೋಷಗಳು ಕಂಡುಬಂದಿವೆ ಎಂದರೆ ವಿಶ್ವವಿದ್ಯಾನಿಲಯದ ಕೌನ್ಸಿಲ್‌ನಲ್ಲಿ ಯಾರು ಹೆಚ್ಚು ಪ್ರಭಾವವನ್ನು ಬೀರುವುದಕ್ಕೆ ಅವಕಾಶ ಇದೆಯೋ ಅಥವಾ ಯಾವ ಕೌನ್ಸಿಲ್ ಸದಸ್ಯರ ಅವರ ಅನುಯಾಯಿಗಳಾಗಿದ್ದಾರೋ ಅಥವಾ ಅವರ ಜೇಲಗಳಾಗಿದ್ದಾರೋ ಅಂತಹವರಿಗೆ ಆರ್ಹತೆ ಇರಲಿ ಅಥವಾ ಇಲ್ಲದೇ ಹೋಗಲಿ ಅಪಾಯಿಂಟ್‌ಮೆಂಟ್ ಆಗುತ್ತಾ

ಇತ್ತು. 1956 ನೇ ಶಾಸನ ಬಂದಾಗ ವಿಶ್ವವಿದ್ಯಾನಿಲಯದ ಆಡಳಿತದಲ್ಲಿ ಮತ್ತು ಬೋಧಕ ವಿಷಯದಲ್ಲಿ ಈ ವಿಧವಾದ ತಾರತಮ್ಯ ಮಾಡಿ ಅಧಿಕಾರಿ ವರ್ಗವನ್ನು ನೇಮಕ ಮಾಡುವುದರಿಂದ ದಕ್ಷತೆಗೆ ಚ್ಯುತಿ ಬರುತ್ತದೆ ಎಂದು ತಿಳಿದುಕೊಂಡು ಈ ಸಭೆ ಬೋರ್ಡ್ ಆಫ್ ಅಪಾಯಿಂಟ್‌ಮೆಂಟ್ಸ್ ಎಂದು ಒಂದು ಸಮಿತಿಯನ್ನು ಮಾಡಿತು. ಅಂದರೆ 26ನೇ ಸೆಕ್ಷನ್ ಯೂನಿವರ್ಸಿಟಿ ಅಮೆಂಡ್‌ಮೆಂಟ್ ಆಕ್ಟ್ 1956 ಪ್ರಕಾರ ಯೂನಿವರ್ಸಿಟಿ ಕೌನ್ಸಿಲ್ ಅಥವಾ ಸಿಂಡಿಕೇಟಿನ ಯಾವುದು ಒಂದು ಕಾರ್ಯ ನಿರ್ವಾಹ ಮಂಡಲ ಇತ್ತು ಅವರಿಂದ ಆ ಅಧಿಕಾರವನ್ನು ತೆಗೆದುಕೊಂಡು ಬಿಟ್ಟಿತು. ಯಾವುದೇ ವಿಶ್ವವಿದ್ಯಾನಿಲಯ ಅಧ್ಯಾಪಕ ವರ್ಗವನ್ನು ನೇಮಕ ಮಾಡಿದರೂ ಸಂಪೂರ್ಣ ಅಧಿಕಾರವನ್ನು ಬೋರ್ಡ್ ಆಫ್ ಅಂಪಾಯಿಮೆಂಟ್ಸ್‌ಗೆ ಕೊಟ್ಟರು.

1956 ರಲ್ಲಿ 26ನೇ ಸೆಕ್ಷನ್ ಅಮೆಂಡ್ ಮಾಡಹಕ್ಕಂಥ ಉದ್ದೇಶ ಏನೆಂದರೆ ಅವರ ಭಾವನೆಯಲ್ಲಿ ಈ ಒಂದು ಇಂಡಿಪೆಂಡೆಂಟ್ ಬೋರ್ಡ್ ಆಫ್ ಅಪಾಯಿಂಟ್‌ಮೆಂಟ್ಸ್, ಪಬ್ಲಿಕ್ ಸರ್ವಿಸ್ ಕಮೀಷನ್ ಅಥವಾ ಸೆಂಟ್ರಲ್ ಪಬ್ಲಿಕ್ ಸರ್ವಿಸ್ ಕಮೀಷನ್ ಇರುವ ಹಾಗೆ ಮಾಡಿದರೆ, ಅವರು ಯಾವ ಪ್ರಭಾವಕ್ಕೂ ಒಳಗಾಗುವುದಿಲ್ಲ. ಮಾನ್ಯ ದೊಡ್ಡ ಗಣ್ಯ ವ್ಯಕ್ತಿಗಳು ಲರ್ನೆಡ್ ಪ್ರೊಫೆಸರ್ಸ್ ಬಹಳ ನಿಷ್ಪಕ್ಷಪಾತವಾಗಿ ವ್ಯಕ್ತಿಯ ಅರ್ಹತೆಯನ್ನು ತಿಳಿದುಕೊಂಡು ಯೂನಿವರ್ಸಿಟಿ ಸಿಂಡಿಕೇಟ್‌ಗೆ ರೆಕಮೆಂಡೇಷನ್ಸ್ ಮಾಡುತ್ತಾರೆ ಎಂದು ಇತ್ತು. ಇನ್ನೊಂದು ವಿಷಯ ಏನೆಂದರೆ 26ನೇ ಸೆಕ್ಷನ್ ಪ್ರಕಾರ ಬೋರ್ಡ್ ರೆಕಮೆಂಡೇಷನ್ಸ್ ಮಾಡಿದರೆ ಆ ರೆಕಮೆಂಡೇಷನ್ಸನ್ನು ಸಿಂಡಿಕೇಟಿನವರು ಪುನಃ ಕನ್ಸಿಡರ್ ಮಾಡುವುದಕ್ಕೆ ಅಧಿಕಾರ ಕೊಟ್ಟಿಲ್ಲ. ನೇರವಾಗಿ ಬೋರ್ಡ್ ಆಫ್ ಅಪಾಯಿಂಟ್‌ಮೆಂಟ್ಸ್‌ನ ರೆಕಮೆಂಡೇಷನ್ ಫಾನ್ಸಲರ್‌ಗೆ ಹೋಗುತ್ತದೆ. ಫಾನ್ಸಲರು ರೆಕಮೆಂಡೇಷನ್ಸ್‌ಗೆ ಸಂಬಂಧಪಟ್ಟ ಕಾಗದ ಪತ್ರಗಳನ್ನು ನೋಡಿ ಇಂತಹವರನ್ನು ನೇಮಕ ಮಾಡಿದ್ದೇವೆ ಎಂದು ಹುಕುಮ್ ಅನ್ನು ಹೊರಡಿಸುತ್ತಾರೆ. ಸಿಂಡಿಕೇಟಿನವರು ಇದರ ಬಗ್ಗೆ 'ಚ' ಕಾರ ಶಬ್ದವನ್ನೂ ಕೂಡ ಎತ್ತುವುದಕ್ಕೆ ಅವಕಾಶವಿಲ್ಲ. ಹಿಂದೆ ಈ ಕೌನ್ಸಿಲ್‌ನ ಅಧಿಕಾರ ದುರುಪಯೋಗವಾಗಿ ತಮ್ಮ ತಮ್ಮ ಕಡೆಯವರಿಗೆ ಅರ್ಹತೆ ಇಲ್ಲದೇ ಇರುವವರಿಗೆ ಯಾವುದೋ ಪಕ್ಷಪಾತಕ್ಕೆ ಒಳಗಾಗಿ ಅಥವಾ ಪ್ರೆಷರ್‌ಗೆ ಒಳಗಾಗಿ ನೇಮಕಮಾಡುತ್ತಿದ್ದರು. ಅದು ಪೂರ್ತಿ ತಪ್ಪಿ ಹೋಗುತ್ತದೆ ಮತ್ತು ಅದು ವಿದ್ವತ್‌ಮಂಡಲಯಾಗಿರುವುದರಿಂದ ನೇಮಕದ ಬಗ್ಗೆ ಯಾವ ವಿಧವಾದ ತಂಟೆತಕರಾರುಗಳು ಬರುವುದಿಲ್ಲ ಎನ್ನುವ ಉದ್ದೇಶದಿಂದ ಮಾಡಿದ್ದಾಗಿದ್ದಿತು.

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ (ವಿದ್ಯಾಶಾಖೆಯ ಉಪಮಂತ್ರಿಗಳು).—1962 ರಲ್ಲಿ ಒಂದು ಅಮೆಂಡ್‌ಮೆಂಟ್ ಆಗಿರುವುದು ತಮ್ಮ ಗಮನದಲ್ಲಿದೆಯೇ?

ಶ್ರೀ ಎಲ್. ಶ್ರೀಕಂಠಯ್ಯ.—26ನೇ ಸೆಕ್ಷನ್ ಅಮೆಂಡ್ ಆಗಿದೆಯೇ ಹೇಳಿ.

Sri N. M. KOTRABASAIAH SOGI.—It consists of a representative of the Syndicate also.

Sri L. SRIKANTAIAH.—Factually I am not wrong composition of the Board of appointment ಆಲ್ಟರ್ ಮಾಡಿದರೇ ಹೊರತು ಸಿಂಡಿಕೇಟ್ ಅದರಮೇಲೆ ವಿಚಕ್ಷಣೆ ನಡೆಸತಕ್ಕ ಅಧಿಕಾರವನ್ನು ಕೊಡಲಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ.

Mr. SPEAKER.—I would like to extend the time for discussion if the House is inclined.

HON. MEMBERS.—Yes.

ಅಧ್ಯಕ್ಷರು.—ಸಭೆಯ ಕಾಲವನ್ನು ಇನ್ನೂ ಅರ್ಧ ಗಂಟೆ ಮುಂದುವರಿಸುತ್ತೇನೆ.

12-30 P.M.

ಶ್ರೀ ಎಲ್. ಶ್ರೀಕಂಠಯ್ಯ.—ಸೆಕ್ಷನ್ 26 ಅಮೆಂಡುಮೆಂಟ್ ಆಗಿದೆ ಎಂದು ಮಾನ್ಯ ಉಪಮಂತ್ರಿಗಳಾದ ಶ್ರೀಮಾನ್ ಸೋಗಿಯವರು ಇಲ್ಲಿ ಹೇಳಿದರು. ಅದರಲ್ಲಿ ಬೋರ್ಡ್ ಆಫ್ ಅಪಾಯಿಂಟ್‌ಮೆಂಟಿನಲ್ಲಿ ಮಾತ್ರ ಬದಲಾವಣೆಗಳನ್ನು ಮಾಡಿದ್ದಾರೆಯೇ ಹೊರತು ಇದರಲ್ಲಿದ್ದ ಅಧಿಕಾರಗಳನ್ನು ಬದಲಾಯಿಸಿಲ್ಲ ಮತ್ತು ಸಿಂಡಿಕೇಟಿಗೆ ಇದರಮೇಲೆ ಅಧಿಕಾರವನ್ನು ಚಲಾಯಿಸುವುದಕ್ಕೆ ಯಾವ ಅಧಿಕಾರವನ್ನು ಕೊಟ್ಟಿಲ್ಲ. ಇದನ್ನು ನಾನು ಮೊದಲೇ ಹೇಳಿದ್ದೇನೆ. 26ನೇ ಸೆಕ್ಷನ್‌ನಲ್ಲಿ ಬೋರ್ಡ್ ಆಫ್ ಅಪಾಯಿಂಟ್‌ಮೆಂಟಿನಲ್ಲಿ ಯಾವ ರೀತಿ ನೇಮಕಗಳನ್ನು ಮಾಡಬೇಕು ಮತ್ತು ಅದಕ್ಕೆ ಹೇಗೆ ಮನ್ನಣೆ ಕೊಡಬೇಕು ಮತ್ತು ಯಾವ ರೀತಿ ಪಕ್ಷಾತೀತವಾಗಿರಬೇಕು ಎನ್ನುವ ಘನ ಉದ್ದೇಶ

(ಶ್ರೀ ಎರ್. ಶ್ರೀಕಂಠಯ್ಯ)

ದಿಂದ ತಂದಿದ್ದಾರೋ ಅಂತಹ ಉದ್ದೇಶ ಕಾರ್ಯಗತವಾಗುತ್ತಿಲ್ಲ. ನಾನು ಕೂಡ 1936 ರಿಂದಲೂ ಸೆನೆಟ್ ಸದಸ್ಯನಾಗಿದ್ದೇನೆ ಮತ್ತು ಈಗ ಸಿಂಡಿಕೇಟ್ ಸದಸ್ಯನಾಗಿಯೂ ಇದ್ದೇನೆ. ನನ್ನ ಅನುಭವದಲ್ಲಿ ಬೋರ್ಡು ಆಫ್ ಅಪಾಯಿಂಟ್‌ಮೆಂಟ್ ಎಂದು ಏನು ಮಾಡಿದ್ದಾರೋ ಅದು ನಿಷ್ಪಕ್ಷಪಾತವಾಗಿ ಕೆಲಸ ಮಾಡುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ ಇದಕ್ಕೆ ಬೇಕಾದರೆ ಮೂರು ನಾಲ್ಕು ನಿದರ್ಶನಗಳನ್ನು ಕೊಟ್ಟರೆ ಇವರ ಬಗ್ಗೆ ಸ್ಪಷ್ಟವಾಗಿ ತಾವೇ ತಿಳಿಯಬಹುದು. ಸಾಮಾನ್ಯವಾಗಿ ಸಿಂಡಿಕೇಟಿನಲ್ಲಿ ಯೂನಿವರ್ಸಿಟಿ ಕೌನ್ಸಿಲ್‌ನಲ್ಲಿ ಪ್ರೊಫೆಸರುಗಳಿಗೆ ಹೆಡ್ ಆಗಿರುವವರು, ಅಕೆಡೆಮಿಕ್ ಕೌನ್ಸಿಲ್‌ನಲ್ಲಿ ಸದಸ್ಯರಾದ ಕೆಲವರು ಹಾಗೂ ಇನ್ನಿತರ ಎಕ್ಸ್ ಅಫಿಷಿಯೋ ಸದಸ್ಯರುಗಳು ಇರುತ್ತಾರೆ. ಇದು ಒಂದು ಎಕ್ಸ್‌ಪರ್ಟ್ ಬಾಡಿ. ಇಂತಹ ಎಕ್ಸ್‌ಪರ್ಟ್ ಬಾಡಿಯವರು ಯಾವ ರೀತಿ ವಿಚಕ್ಷಣೆಯಿಂದ ಕೆಲಸ ಮಾಡುತ್ತಾರೆ ಎನ್ನುವುದನ್ನು ಮುಂದೆ ಹೇಳುತ್ತೇನೆ.

ಈಗ 26ನೇ ಸೆಕ್ಷನ್ ಪ್ರಕಾರ ಬೋರ್ಡ್ ಆಫ್ ಅಪಾಯಿಂಟ್‌ಮೆಂಟುಗಳನ್ನು ಮಾಡಿರುವ ಪ್ರಸಂಗಗಳು ಯಾವ ರೀತಿ ಸಂದೇಹಕ್ಕೆ ಎಡೆಕೊಡುತ್ತವೆ ಎನ್ನುವುದನ್ನು ವ್ಯಕ್ತಮಾಡಲು ಎರಡು ಮೂರು ನಿದರ್ಶನಗಳನ್ನು ತಮ್ಮ ಗಮನಕ್ಕೆ ತರುತ್ತೇನೆ. ನಿಜವಾಗಿಯೂ ತಮ್ಮ ಶಿಫಾರಸ್ಸುಗಳನ್ನು ಮಾಡುವಾಗ ಅವರು ತಮ್ಮ ಕರ್ತವ್ಯವನ್ನು ನಿಷ್ಪಕ್ಷಪಾತವಾಗಿ ಮಾಡಿದ್ದಾರೆಯೇ ಎನ್ನುವುದಕ್ಕಾಗಿ ಹೇಳುತ್ತೇನೆ ಇದರಲ್ಲಿ ವ್ಯಕ್ತಿಗಳ ಹೆಸರು ಹಾಗೂ ಇಲಾಖೆ ಹೆಸರು ಹೇಳಬಾರದು ಎಂದು ಹೇಳಿದ್ದಾರೆ ಅವನ್ನು ಒಂದೂ ಹೇಳುವುದಿಲ್ಲ. ಯಾವುದೋ ಒಂದು ಡಿಪಾರ್ಟುಮೆಂಟಿನಲ್ಲಿ ಒಂದು ಕೆಲಸ ಖಾಲಿ ಬಿತ್ತು. ಅದಕ್ಕಾಗಿ ಅರ್ಜಿಗಳನ್ನು ಕರೆದರು. ಅದಕ್ಕೆ ಒಬ್ಬ ವ್ಯಕ್ತಿ ತನ್ನ ಅರ್ಹತಾ ಪತ್ರಗಳೊಡನೆ ಅರ್ಜಿ ಕಳುಹಿಸಿದ್ದರು. ಇವರನ್ನು ಎಕ್ಸ್‌ಪರ್ಟ್ ಬಾಡಿ ಇಂಟರ್‌ವ್ಯೂಗಾಗಿ ಕರೆದಾಗ ಅವರು ಅರ್ಹರಲ್ಲ ಎಂದು ಅವರ ಅರ್ಜಿಯನ್ನು ತಳ್ಳಿಹಾಕಿದರು. ಆದರೆ ಆ ವ್ಯಕ್ತಿಯಲ್ಲಿ ಎಕ್ಸ್‌ಪರ್ಟ್ ಬಾಡಿಯಲ್ಲಿರುವ ಒಬ್ಬರಿಗೆ ಇಂಟರೆಸ್ಟ್ ಇದ್ದುದರಿಂದ ಹೇಗಾದರೂ ಮಾಡಿ ಅವರಿಗೆ ಕೆಲಸ ಕೊಡಿಸಬೇಕು ಎಂದು ಪ್ರಯತ್ನಪಟ್ಟರು. ಇನ್ನೊಂದು ವೇಕೆನ್ಸಿ ಬಿದ್ದಾಗ ಮೊದಲು ಅನರ್ಹ ಎಂದು ಆಗಿದ್ದ ವ್ಯಕ್ತಿಯಿಂದ ಪುನಃ ಅರ್ಜಿ ಹಾಕಿಸಿ ಹಿಂದಿನ ಬೋರ್ಡು ಅವರು ಕ್ವಾಲಿಫಿಕೇಷನ್ ಇತ್ಯಾದಿಗಳಲ್ಲಿ ಸರಿಯಾಗಿಲ್ಲ ಎಂದು ಹಿಂದೆ ತೀರ್ಮಾನ ಮಾಡಿದ್ದರೂ, ಅವೇ ವ್ಯಕ್ತಿ ಎಲ್ಲದರಲ್ಲೂ ಲಾಯಕ್ಕಾಗಿದ್ದಾರೆ ಎಂದು ಫಸ್ಟ್‌ಕ್ಲಾಸು ಸರ್ಟಿಫಿಕೇಟನ್ನು ಇನ್ನೊಂದು ಬೋರ್ಡು ಕೊಟ್ಟು ಅವರನ್ನು ನೇಮಕವಾಗುವಂತೆ ಮಾಡಿದರು. ಹೀಗೆ ಇವರು ಮಾಡುವ ತೀರ್ಮಾನಕ್ಕೆ ನಭೂತೋನ ಭವಿಷ್ಯತಿ ಎನ್ನುವಂತೆ ಆಗುತ್ತಿದೆ. ಹೀಗೆ ಎಕ್ಸ್‌ಪರ್ಟು ಬಾಡಿಯವರು ಸರ್ಟಿಫಿಕೇಟನ್ನು ಕೊಟ್ಟರೆ ನಾವೇನು ಹೇಳಬೇಕು ? ಇವೆಲ್ಲಾ ಮೂರು ತಿಂಗಳ ಅಂತರದಲ್ಲಿ ಆಗಿದೆ. ಹಿಂದೆ ಇದ್ದ ಬೋರ್ಡು ಹೋಗಿ ಬೇರೆ ಮತ್ತೊಂದು ಬೋರ್ಡು ಬಂದು ಅದರ ಮೂಲಕ ಇದನ್ನೆಲ್ಲಾ ಮಾಡಿದ್ದಾರೆ. ಇದರಿಂದ ಎಕ್ಸ್‌ಪರ್ಟು ಬಾಡಿ ಎನ್ನುವ ಮಾತಿಗೆ ಮರ್ಯಾದೆ ಬರುತ್ತದೆಯೇ ! ಒಂದು ಸಾರಿ ನಾಲಾಯಕ್ಕು ಎಂದು ತೀರ್ಮಾನವಾದ ಮೇಲೆ ಅದೇ ವ್ಯಕ್ತಿಯನ್ನು ಪುನಃ ಹಿಂದಿನ ಬಾಗಿಲಿನಿಂದ ತಂದು ನೇಮಕ ಮಾಡಿದರೆ ಸಂದೇಹ ಬರುವುದಿಲ್ಲವೇ ? ಇನ್ನು ಎರಡನೇ ನಿದರ್ಶನ ಹೇಳುತ್ತೇನೆ. ಇದರಲ್ಲೂ ಕೂಡ ಹೆಸರು ಹಾಗೂ ಇಲಾಖೆ ಹೇಳುವುದಿಲ್ಲ. ಯಾವುದೋ ಒಂದು ಡಿಪಾರ್ಟುಮೆಂಟಿನಲ್ಲಿ ಎರಡು ರೀಡರುಗಳ ಪೋಸ್ಟನ್ನು ಖಾಲಿ ಬಿತ್ತು ಎಂದು ಇದಕ್ಕಾಗಿ ಅರ್ಜಿಗಳನ್ನು ಕರೆದಿದ್ದರು. ಇದರಲ್ಲಿ ಸುಮಾರು ಏಳೆಂಟು ಜನರು ಪಿ. ಹೆಚ್. ಡಿ. ಪದವೀಧರರು ಹಾಗು ಇನ್ನಿತರ ಒಳ್ಳೆಯ ಅರ್ಹತೆಗಳನ್ನು ಪಡೆದವರು ಹಾಗೂ ಫಸ್ಟ್‌ಕ್ಲಾಸು ಮಾಡಿದವರು ಮತ್ತು ಇದರ ಜೊತೆಗೆ ಥರ್ಡ್ ಕ್ಲಾಸಿನಲ್ಲಿ ಪಾಸ್ ಆದವರು ಎಂ.ಎ. ಫೇಲ್ ಆದವರು ಅರ್ಜಿಗಳನ್ನು ಹಾಕಿದ್ದರು. ಇವರನ್ನೆಲ್ಲಾ ಇಂಟರ್‌ವ್ಯೂಗಾಗಿ ಕರೆದರು. ಇವರಲ್ಲಿ ಎಕ್ಸ್‌ಪರ್ಟು ಬಾಡಿಯವರು ಒಳ್ಳೆಯ ಪಿ. ಹೆಚ್. ಡಿ. ಹಾಗೂ ಫಸ್ಟ್ ಕ್ಲಾಸು ಪಾಸುಮಾಡಿ ಡಿಗ್ರಿ ಪಡೆದವರನ್ನು ನಾಲಾಯಕ್ಕು ಎಂದು ತೀರ್ಮಾನ ಮಾಡಿ ಅವರಿಗೆ ಬೇಕಾದವರು ಎಂದು ಯಾರೋ ಒಬ್ಬರನ್ನು ರೀಡರುಗಳ ಜಾಗಕ್ಕೆ ನರಿಯಾದವರು ಎಂದು ನೇಮಕ ಮಾಡಿದರೆ ಎಕ್ಸ್‌ಪರ್ಟ್ ಬಾಡಿಗೆ ಇದರಿಂದ ಮರ್ಯಾದೆ ಬರುತ್ತದೆಯೇ ? ಈ ರೀತಿ ರಿಕವೆಂಡೇಷನ್‌ಗಳು ಬಂದರೆ ನಾವೇನು ಹೇಳುವದು ? ಇಲ್ಲರುವ ಸದಸ್ಯರುಗಳು ಅಧ್ಯಕ್ಷರ ಬಂದು ಭಯಕ್ಕಾಗಿಯೋ ಇಲ್ಲವೇ ತಮನ್ನೇ ಇಲ್ಲಿ ಮುಂದಿನ ನಲಕ್ಕೂ ಚುನಾಯಿಸಲಿ ತಮಗೆ ಟಿ. ಎ. ಹಾಗೂ ಡಿ. ಎ. ಬರಲಿ ಎಂತಲೋ ಏನೋ ಹೇಗೆ ಇಲ್ಲಿ ರೀಡರುಗಳ ಪೋಸ್ಟನ್ನು ತಮ್ಮ ಮನಸ್ಸಿಗೆ ಬಂದಂತೆ ಭರ್ತಿ ಮಾಡಿದರು. ಇವರನ್ನು ಇಂಟರ್‌ವ್ಯೂನಲ್ಲಿ ಅಳೆಯಲು ಏನಾದರೂ ಒಂದು ಬ್ಯಾರಾಮೀಟರು ಇಟ್ಟಿದ್ದಾರೋ ಏನೋ ನನಗಂತೂ ಗೊತ್ತಿಲ್ಲ. ಒಳ್ಳೆಯ ವೇದಾಪಿಗಳು ಫಸ್ಟ್‌ಕ್ಲಾಸು ಬಂದವರು, ಪಿ.ಹೆಚ್.ಡಿ. ಡಿಗ್ರಿ ಪಡೆದವರನ್ನು ಡಿಸ್‌ಕ್ವಾಲಿಫೈ ಮಾಡಿದರೆ ಈ ಎಕ್ಸ್‌ಪರ್ಟ್ ಬಾಡಿಯನ್ನು ನಾವೇನು ಹೇಳುವುದು ?

ನಾವು ಈ ಎಕ್ಸ್‌ಪರ್ಟ್ ಬಾಡಿ ಮೇಲೆ ಪೂರ್ತ ನಂಬಿಕೆಯನ್ನು ಇಟ್ಟುಕೊಂಡಿರುತ್ತೇವೆ. ಅದರಂತೆ ಥಾನ್ಸ್‌ಲರ್ ಕೂಡ ಅಪಾಯಿಂಟ್ ಮಾಡುತ್ತಾರೆ. ಮೂರನೆಯ ದರ್ಜೆಯಲ್ಲಿ ಪಾಸ್ ಆದವರಿಗೆ ಕೆಲಸ ಸಿಕ್ಕಿದ್ದು ಎರಡನೆಯ ನಿದರ್ಶನವಾದರೆ, ಮೂರನೆಯ ನಿದರ್ಶನ ಒಂದನ್ನು ಹೇಳುತ್ತೇನೆ. ಒಂದು ಇಲಾಖೆಯಲ್ಲಿ ಎರಡು ಪ್ರೊಫೆಸರ್‌ಗಳ ಪೋಸ್ಟ್ ಖಾಲಿಯಿತ್ತು. ಮೊದಲನೆಯ ಪೋಸ್ಟ್‌ನಲ್ಲಿ ಯಾರು ಅಭ್ಯರ್ಥಿಯಾಗಿದ್ದನೋ ಆತನ ಸ್ನೇಹಿತ ಎಕ್ಸ್‌ಪರ್ಟ್ ಬಾಡಿಯಲ್ಲಿ ಹೋಗಿ ಸೆಲೆಕ್ಟ್ ಮಾಡುವುದಕ್ಕೆ ಕೂತ. ಈ ಕಾರಣದಿಂದ ಆತನ ಸ್ನೇಹಿತ ಸೆಲೆಕ್ಟ್ ಆದ. ಇನ್ನೊಂದು ಪೋಸ್ಟ್‌ನಲ್ಲಿ ಯಾರು ಅಭ್ಯರ್ಥಿಯಾಗಿದ್ದನೋ ಅವನ ಸ್ನೇಹಿತ ಎಕ್ಸ್‌ಪರ್ಟ್ ಬಾಡಿಯಲ್ಲಿ ಹೋಗಿ ಸೆಲೆಕ್ಟ್ ಮಾಡುವುದಕ್ಕೆ ಕೂತ. ನಂತರ ಈತನ ಸ್ನೇಹಿತ ಸೆಲೆಕ್ಟ್ ಆದ. ಒಟ್ಟಿನಲ್ಲಿ ಇಬ್ಬರು ಸ್ನೇಹಿತರಿಗೂ ಕೆಲಸ ಸಿಕ್ಕಿತು. ಅವನ ಬೆನ್ನನ್ನು ಇವನು ಕೆರೆದ, ಇವನ ಬೆನ್ನನ್ನು ಅವನು ಕೆರೆದ. ಈ ಕೇಸ್ ಈಗ ಸುಪ್ರೀಮ್ ಕೋರ್ಟ್‌ನಲ್ಲಿ ಇರುವುದರಿಂದ ಇನ್ನು ಹೆಚ್ಚು ಇದರ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ. ಗೀಪ್ ಅಂಡ್ ಟೇಕ್ ವ್ಯಾಪಾರ ನಡೆಯುತ್ತಿರುವುದನ್ನು ನೋಡಿದರೆ ಮನಸ್ಸಿಗೆ ಬಹಳ ಬೇಜಾರಾಗುತ್ತದೆ. ಅಲ್ಲಿ ಗಬ್ಬು ಹೊಡೆಯುತ್ತಿದೆ. ಎಕ್ಸ್‌ಪರ್ಟ್ ಬಾಡಿಯಲ್ಲಿ ಸೆಲೆಕ್ಟ್ ಮಾಡುವುದಕ್ಕೆ ಯಾರು ಇರುತ್ತಾರೆ ಎಂಬುದನ್ನು ಕೆಲವರು ಮೊದಲೇ ತಿಳಿದುಕೊಂಡು, ಅವರನ್ನು ಹೋಟೆಲ್ ಇಂಟರ್‌ನ್ಯಾಷನಲ್‌ನಲ್ಲಿಯಾಗಲೀ, ಯೂನಿವರ್ಸಿಟಿ ಗೆಸ್ಟ್‌ಹೌಸ್‌ನಲ್ಲಿ ಯಾಗಲೀ ಇಳಿಸಿ ಅವರಿಗೆ ಎಲ್ಲಾ ಅನುಕೂಲಗಳನ್ನು ಮಾಡಿಕೊಡುತ್ತಾರೆ. ಯಾರಿಗೆ ಕೆಲಸ ಕೊಡಬೇಕು ಎಂಬುದು ಮೊದಲೇ ತೀರ್ಮಾನವಾಗಿ ಹೋಗಿರುತ್ತದೆ. ಈ ಕಾರಣದಿಂದ ಈ ಕಮಿಟಿಯ ಬಗ್ಗೆ ನಮಗೆ ಯಾವ ಅಭಿಮಾನವೂ ಬರುವುದಿಲ್ಲ. ನಾಲ್ಕನೆಯ ನಿದರ್ಶನ ಒಂದನ್ನು ಹೇಳುತ್ತೇನೆ. ಇಲಾಖೆಯ ಹೆಸರನ್ನು ಹೇಳುವುದಿಲ್ಲ. ಒಂದು ಪ್ರೊಫೆಸರ್ ಪೋಸ್ಟ್ ಮೂರು ವರ್ಷದಿಂದ ಖಾಲಿ ಇತ್ತು. ಎಕ್ಸ್‌ಪರ್ಟ್ ಬಾಡಿಯಲ್ಲಿ ಸೆಲೆಕ್ಟ್ ಮಾಡುವುದಕ್ಕೆ ಇದ್ದ ಅಧಿಕಾರಿಯವರು 'ಎ' ಎಂಬ ಅಭ್ಯರ್ಥಿಯನ್ನು ಅಪಾಯಿಂಟ್ ಮಾಡುವ ಬಗ್ಗೆ ಅಭಿಪ್ರಾಯಪಟ್ಟರು. ಅಲ್ಲಿಯ ಪ್ರಿನ್ಸಿಪಿಂಗ್ ಆಫೀಸರ್ ಅವರು 'ಬಿ' ಎಂಬ ಇನ್ನೊಬ್ಬ ಅಭ್ಯರ್ಥಿಯನ್ನು ಸೆಲೆಕ್ಟ್ ಮಾಡುವಂತೆ ಸೆಲೆಕ್ಟ್ ಕಮಿಟಿಯಲ್ಲಿ ಇದ್ದ ಅಧಿಕಾರಿಗೆ ಹೇಳಿದರು. ಆದರೆ 'ಬಿ' ಎಂಬ ಅಭ್ಯರ್ಥಿಯನ್ನು ಸೆಲೆಕ್ಟ್ ಮಾಡುವುದಕ್ಕೆ ಸೆಲೆಕ್ಟ್ ಕಮಿಟಿಯ ಅಧಿಕಾರಿಗೆ ಇಷ್ಟ ಇಲ್ಲ. ಒಂದು ಪೋಸ್ಟ್ ಖಾಲಿ ಇದ್ದಾಗ ಎಕ್ಸ್‌ಪರ್ಟ್ ಬಾಡಿಯಲ್ಲಿದ್ದವರು ಯಾರಾದರು ಒಬ್ಬರನ್ನು ಅರಿನಬೇಕು, ನಂತರ ಅವರ ಅಭಿಪ್ರಾಯದಂತೆ ಥಾನ್ಸಲರ್ ಅವರು ಅಪಾಯಿಂಟ್ ಮಾಡಬೇಕು. ಆದರೆ ಈ ಕೇಸ್‌ನಲ್ಲಿ ಆ ರೀತಿ ಆಗಲಿಲ್ಲ. ಪ್ರಿನ್ಸಿಪಿಂಗ್ ಆಫೀಸರ್‌ಗೆ 'ಬಿ' ಎಂಬ ಅಭ್ಯರ್ಥಿಯನ್ನು ಸೆಲೆಕ್ಟ್ ಮಾಡುವುದಕ್ಕೆ ಇಷ್ಟವಿದ್ದರಿಂದ, ಇವರು ಮತ್ತು ಸೆಲೆಕ್ಟ್ ಕಮಿಟಿಯ ಅಧಿಕಾರಿ ಇಬ್ಬರೂ ಸೇರಿ ಇನ್ನೊಂದು ಪೋಸ್ಟ್‌ನ್ನು ಕ್ರಿಯೇಟ್ ಮಾಡಿ ಇಬ್ಬರನ್ನು ಕೆಲಸಕ್ಕೆ ತೆಗೆದುಕೊಳ್ಳಬೇಕಾಗಿದೆ ಎಂದು ಕಾಗದ ಬರೆದರು. ಇನ್ನೊಂದು ಪೋಸ್ಟ್ ಬಗ್ಗೆ ಇದುವರೆಗೆ ಯು.ಜಿ.ಸಿ. ಅವರು ಮಂಜೂರಾತಿ ಕೊಟ್ಟಿಲ್ಲ. ಇದರಿಂದ ಏನಾಗಿದೆ ಎಂದರೆ 'ಬಿ' ಗೆ ಇನ್ನೊಂದು ಪೋಸ್ಟ್‌ನ್ನು ಕ್ರಿಯೇಟ್ ಮಾಡುವವರೆಗೆ 'ಎ' ಗೆ ಕೆಲಸ ಸಿಕ್ಕುವಾಗಿಲ್ಲ. ಈ ತರಹ ಪರಿಸ್ಥಿತಿ ಬಂದಿದೆ. ಈಗ ನಾಲ್ಕು ನಿದರ್ಶನಗಳನ್ನು ಕೊಟ್ಟಿದ್ದೇನೆ. ಇನ್ನೂ ಅನೇಕ ನಿದರ್ಶನಗಳನ್ನು ಕೊಡಬಹುದು. ಆದರೆ ಇಲ್ಲಿಯ ರಾಜಕೀಯ ಎಷ್ಟರಮಟ್ಟಿಗೆ ಅನಹ್ಯವಾಗಿದೆ ಎಂಬುದನ್ನು ಇನ್ನು ಹೆಚ್ಚು ಹೇಳುವುದಕ್ಕೆ ಇಷ್ಟ ಪಡುವುದಿಲ್ಲ. ನಾನು ಈಗ ಅಮೆಂಡ್‌ಮೆಂಟ್ ತಂದಿರುವ ಉದ್ದೇಶವಾದರೂ ಇಷ್ಟೇ: ಎಕ್ಸ್‌ಪರ್ಟ್ ಬಾಡಿಯವರು ಯಾರನ್ನು ರೆಕಮೆಂಡ್ ಮಾಡುತ್ತಾರೋ, ಅವರ ಹೆಸರನ್ನು ಥಾನ್ಸಲರ್‌ಗೆ ಕಳಿಸುವುದಕ್ಕೆ ಮುಂಚೆ ಸಿಂಡಿಕೇಟ್‌ಗೆ ಕಳಿಸಬೇಕು ಎಂಬುದು. ಸಿಂಡಿಕೇಟ್‌ನಲ್ಲಿ ಸರ್ಕಾರದಿಂದ ನೇಮಿಸಲ್ಪಟ್ಟ ಸದಸ್ಯರು ಇರುತ್ತಾರೆ. ಮತ್ತು ಚುನಾಯಿತ ಸದಸ್ಯರು ಸಹ ಇರುತ್ತಾರೆ. ಒಟ್ಟು 15 ಜನ ಸದಸ್ಯರು ಇದ್ದಾರೆ. ಸೆಲೆಕ್ಟ್ ಆದ ಅಭ್ಯರ್ಥಿಯ ಬಗ್ಗೆ ಸಿಂಡಿಕೇಟ್ ಸದಸ್ಯರು ಸಹ ಪೂರ್ವಭಾವಿಯಾಗಿ ಕನ್ಸಿಡರ್ ಮಾಡುವುದು ಒಳ್ಳೆಯದು, ಅಲ್ಲಿಯಾದರೆ ಅಭ್ಯರ್ಥಿಯ ಬಗ್ಗೆ ನಾನಾ ತರಹ ಅಭಿಪ್ರಾಯಗಳು ಬರುತ್ತವೆ. ಸೆಲೆಕ್ಟ್ ಆದ ಅಭ್ಯರ್ಥಿಯ ಗುಣ, ನಡತೆ, ಅನುಭವ ಎಲ್ಲವನ್ನೂ ತಿಳಿದವರೂ ಸಹ ಕೆಲವರು ಇರುತ್ತಾರೆ. ಅಂತಹವರು ತಮ್ಮ ಅಭಿಪ್ರಾಯವನ್ನು ತಿಳಿಸುತ್ತಾರೆ. ಮತ್ತು ಸಲಹೆ ಕೊಡುತ್ತಾರೆ. ಅನಂತರ ಸೆಲೆಕ್ಟ್ ಆದ ಅಭ್ಯರ್ಥಿಯನ್ನು ಇಲ್ಲಿಯೂ ಸಹ ಸದಸ್ಯರು ಯುನಾನಿಮಸ್ ಆಗಿ ಒಪ್ಪಿಕೊಂಡರೆ ಸಂತೋಷ. ಏನಾದರು ಭಿನ್ನಾಭಿಪ್ರಾಯ ಬಂದರೆ ಅಭ್ಯರ್ಥಿಗೆ ಸಂಬಂಧಪಟ್ಟ ಫುಲ್ ಡಾಕ್ಯುಮೆಂಟನ್ನು ಥಾನ್ಸಲರ್‌ಗೆ ಕಳಿಸಿಕೊಡಲಿ. ಸಿಂಡಿಕೇಟ್‌ನವರು ಕೊಟ್ಟಿರುವ ಅಭಿಪ್ರಾಯವನ್ನು ಸಾಂಗವಾಗಿ ಥಾನ್ಸಲರ್ ಅವರು ಪರಿಶೀಲನೆ ಮಾಡಿ ತಮ್ಮ ಆದೇಶ ಕೊಡಲಿ. ಈ ಉದ್ದೇಶಕ್ಕಾಗಿಯೇ ನಾನು ಈ ತಿದ್ದುಪಡಿಯನ್ನು ತಂದಿರುವುದು. ಈಗ ನಾನು ತಂದಿರತಕ್ಕಂಥ ತಿದ್ದುಪಡಿ ಹೊಸ ದ್ದೇನು ಅಲ್ಲ.

ಶ್ರೀ ಎಚ್. ಬಿ. ಶ್ರೀಕಾಂತಯ್ಯ.—ಯೂನಿವರ್ಸಿಟಿಯ ಎಸ್ಟಾಬ್ಲಿಷ್‌ಮೆಂಟ್ ಸ್ಟಾಫ್‌ಗೆ ಅಪಾಯಿಂಟ್ ಮಾಡುವುದಕ್ಕೆ ಸಿಂಡಿಕೇಟ್‌ನವರೇ ಈ ಸಂದರ್ಭದಲ್ಲಿ ಒಂದು ರೂಲ್ ಮಾಡುವು ದಕ್ಕಾಗುವುದಿಲ್ಲವೇ ?

Sri L. SRIKANTAIAH.—There is a separate statutory body for appointments. So the Syndicate cannot sit in judgement over the recommendations of the Board. It becomes ultra vires. That is my legal opinion with regard to it.

ಈಗ ಇರತಕ್ಕಂಥ ಬೆಂಗಳೂರು ವಿಶ್ವವಿದ್ಯಾನಿಲಯದ ಶಾಸನವನ್ನು ನೋಡುವುದಾದರೆ ಬೋರ್ಡ್ ಆಫ್ ಅಪಾಯಿಂಟ್‌ಬಗ್ಗೆ 28ನೇ ವಿಧಿಯಲ್ಲಿರುವ ಕ್ಲಾಸ್ ಒಂದು, ಎರಡು ಮತ್ತು ಮೂರನೆಯ ಮತ್ತು ನಾಲ್ಕನೆಯ ಹಾಗೂ ಐದನೆಯ ಕ್ಲಾಸ್‌ಗಳಲ್ಲಿ ಬಹಳ ಕ್ಲಿಯರ್ ಆಗಿ ಹೇಳಲಾಗಿದೆ. ಇದೇ ರೀತಿಯ ಶಾಸನವನ್ನು ಮೈಸೂರು ವಿಶ್ವವಿದ್ಯಾನಿಲಯಕ್ಕೂ ಅನ್ವಯಿಸು ವುದು ಒಳ್ಳೆಯದು.

ಶ್ರೀ ಕೆ. ಪುಟ್ಟಸ್ವಾಮಿ.—ಕಳೆದ ಅಧಿವೇಶನದಲ್ಲಿ ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಆದಂತಹ ಅಪಾಯಿಂಟ್‌ಮೆಂಟ್‌ಗಳ ಬಗ್ಗೆಯೂ ಕೂಡ ಅವಿವೇಕ ನಡೆದಿದೆ ಎಂದು ಕೆಲವರು ಹೇಳಿದ್ದರು.

ಶ್ರೀ ಎಲ್. ಶ್ರೀಕಂಠಯ್ಯ.—ಈಗ ಸಂದಿಗ್ಧ ಪರಿಸ್ಥಿತಿ ಬಂದಿದೆ. 1956ಕ್ಕೆ ಮುಂಚೆ ಅಪಾಯಿಂಟ್‌ಮೆಂಟ್ ಅಧಿಕಾರವನ್ನು ಪೂರ್ತಾ ಕೌನ್ಸಿಲ್‌ನ ತೀರ್ಮಾನಕ್ಕೆ ಬಿಟ್ಟಿದ್ದರು. ಅಲ್ಲಿ ಅನ್ಯಾಯ ನಡೆಯುತ್ತಿದೆ ಎಂಬುದಾಗಿ ಎಕ್ಸ್‌ಪರ್ಟ್ ಬಾಡಿಯನ್ನು ನೇಮಕ ಮಾಡಲಾಯಿತು. ಕೌನ್ಸಿಲ್ ದೆವ್ವವಾದರೆ ಎಕ್ಸ್‌ಪರ್ಟ್ ಬಾಡಿ ದೊಡ್ಡ ದೆವ್ವವಾಗಿದೆ. ಮೊದಲು ಪೂರ್ತಾ ಪವರ್‌ನ್ನು ಇಟ್ಟುಕೊಂಡಿದ್ದ ಕೌನ್ಸಿಲ್‌ನ ದೆವ್ವದ ಕಾಟದಿಂದ ತಪ್ಪಿಸಿಕೊಳ್ಳಬೇಕೆಂದು ಎಕ್ಸ್‌ಪರ್ಟ್ ಬಾಡಿ ಮಾಡಿದರೆ ಇದೂ ಕೂಡ ದೊಡ್ಡ ದೆವ್ವವಾದರೆ ಏನು ಮಾಡಬೇಕು. ಈ ಒಂದು ಸಂದಿಗ್ಧ ಪರಿಸ್ಥಿತಿ ಯಲ್ಲಿ ಇವತ್ತಿನದಿವಸ ನಾವು ತೊಳಲಾಡುತ್ತಿದ್ದೇವೆ. ಯಾವುದಾದರು ಒಂದು ಮಾರ್ಗದಿಂದ ಟೀಚಿಂಗ್ ಸ್ಟಾಫನ್ನು ಅಪಾಯಿಂಟ್ ಮಾಡಲೇಬೇಕಾಗಿದೆ. ಈ ಕಾರಣಂದ ಈಗ ಇರತಕ್ಕಂಥ ಲೋಪದೋಷಗಳನ್ನು ಸರಿಪಡಿಸಲು ಒಂದು ಮಾರ್ಗದರ್ಶನವನ್ನು ಹುಡುಕಬೇಕಾಗಿದೆ. ಸೆಲೆಕ್ಟ್ ಮಾಡತಕ್ಕಂಥ ಅಧಿಕಾರಿಗಳನ್ನು ಸ್ವರ್ಗದಿಂದ ಕರೆದುಕೊಂಡು ಬರುವುದಕ್ಕಾಗುವುದಿಲ್ಲ. ಅದರೂ ಕೂಡ ಒಂದು ಒಳ್ಳೆಯ ಕ್ರಮವನ್ನು ಹಾಕಿಕೊಂಡರೆ ಒಳ್ಳೆಯದೆಂದು ನನ್ನ ಅಭಿಪ್ರಾಯವಾಗಿದೆ. 1956ಕ್ಕೆ ಮುಂಚೆ ಪೂರ್ತಾ ಅಧಿಕಾರವನ್ನು ಕೌನ್ಸಿಲ್‌ಗೆ ಕೊಟ್ಟಿದ್ದನ್ನು ತೆಗೆದು ಈಗ ಬೋರ್ಡ್ ಆಫ್ ಅಪಾಯಿಂಟ್‌ಮೆಂಟ್‌ಗೆ ಕೊಡಲಾಗಿದೆ. ಬೋರ್ಡ್ ಆಫ್ ಅಪಾಯಿಂಟ್‌ಮೆಂಟ್‌ಗೂ ಕೂಡ ಈ ಅಧಿಕಾರ ಬೇಡ ಎನ್ನುವುದಾದರೆ, ಈ ಅಧಿಕಾರವನ್ನು ಛಾನ್ಸಲರ್‌ಗೆ ಕೊಡುವುದಕ್ಕಾಗುವು ದಿಲ್ಲ. ಅವರೇ ಈ ಕೆಲಸವನ್ನು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಸಿಂಡಿಕೇಟ್‌ನವರು ತೀರ್ಮಾನ ಮಾಡಲಿ ಎಂದು ನೀವು ಹೇಳುವುದಾದರೆ ಅಲ್ಲಿಯೂ ಕೂಡ ರಾಜಕೀಯ ಬಂದರೆ ಏನು ಮಾಡುವುದು ?

ಶ್ರೀ ಎಲ್. ಶ್ರೀಕಂಠಯ್ಯ.—ಇವತ್ತಿನ ದಿವಸ ತಮ್ಮ ತಮ್ಮವರಿಗೆ ಕೆಲಸ ಕೊಡಿಸಬೇಕೆಂಬ ಕಾರಣದಿಂದ ರಾಜಕೀಯ ನಡೆಯುತ್ತಿದೆ. ಈ ಒಂದು ಅನ್ಯಾಯವನ್ನು ತಪ್ಪಿಸಲು ನಾನು ಒಂದು ಕಾಂಪ್ರಮೈಸ್ ಫಾರಮ್‌ಲಾವನ್ನು ತಂದಿದ್ದೇನೆ.

ಶ್ರೀ ಕೆ. ಪುಟ್ಟಸ್ವಾಮಿ.—ಮಧ್ಯಮ ಮಾರ್ಗ ಮೊದಲು ಇತ್ತು. 1956ಕ್ಕೆ ಮುಂಚೆ ಅಪಾಯಿಂಟ್ ಬಗ್ಗೆ ಸ್ಯಾಬ್ಜೆಕ್ಟ್‌ಚುವರಿ ಬಾಡಿ ಶಿಫಾರಸ್ ಮಾಡಿದ್ದು ಯೂನಿವರ್ಸಿಟಿ ಕೌನ್ಸಿಲ್ ಮುಂದೆ ಬರುತ್ತಿತ್ತು. ನಂತರ ಕೌನ್ಸಿಲ್‌ನವರು ತಮ್ಮ ಅಭಿಪ್ರಾಯದ ಜೊತೆಯಲ್ಲಿ ಸರ್ಕಾರಕ್ಕೆ ಕಳಿಸು ತ್ತಿದ್ದರು. ನಂತರ ನೇಮಕವಾಗುತ್ತಿತ್ತು. ಆಗಲೂ ಕೂಡ ನೇಮಕದ ಬಗ್ಗೆ ಅತೃಪ್ತಿ ಕಾಣು ತ್ತಿತ್ತು. ನಾನಾ ಅಭಿಪ್ರಾಯಗಳನ್ನು ಅಪಾಯಿಂಟ್ ಮಾಡಿದ ಬಗ್ಗೆ ಕೆಲವರು ಕೊಡುತ್ತಿದ್ದರು. ಮಾನವರೇ ಇಲ್ಲದಿರುವ ಕಮಿಟಿಯನ್ನು ಏನಾದರೂ ಮಾಡಿದರೆ ಕೆಲಸ ಸರಿಯಾಗಿ ನಡೆಯಬಹು ದೆಂದು ಕಾಣುತ್ತದೆ.

ಶ್ರೀ ಎಲ್. ಶ್ರೀಕಂಠಯ್ಯ.—ಈಗ ನಾನು ನನ್ನ ತಿದ್ದುಪಡಿ ಮಸೂದೆಯನ್ನು ತಂದಿರುವ ಉದ್ದೇಶ ಇಷ್ಟೆ. ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ನೇಮಕದ ಸಂಬಂಧದಲ್ಲಿ ಯಾವ ರೀತಿ ಉಪ ವಿಭಾಗ ಇದೆಯೋ ಅದೇ ರೀತಿ ಅವಕಾಶವನ್ನು ಮೈಸೂರು ವಿಶ್ವವಿದ್ಯಾನಿಲಯಕ್ಕೂ ಮಾಡುವುದು. ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಬೋರ್ಡ್ ಆಫ್ ಅಪಾಯಿಂಟ್‌ಮೆಂಟ್‌ನವರು ಮಾಡತಕ್ಕಂಥ ಸಿಫಾರಸ್ಸುಗಳು ಸಿಂಡಿಕೇಟಿಗೆ ಬಂದು ಆ ನಂತರ ಛಾನ್ಸಲರಿಗೆ ಹೋಗುವುದು.

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಈ ಪದ್ಧತಿ ಇಲ್ಲ. ಆದ್ದರಿಂದ ಬೆಂಗಳೂರು ವಿಶ್ವವಿದ್ಯಾನಿಯದಲ್ಲಿ ಬೋರ್ಡ್ ಆಫ್ ಅಪಾಯಿಂಟ್‌ಮೆಂಟ್ ಉಪ ವಿಭಾಗ ಯಾವ ರೀತಿ ಇದೆಯೋ ಅದನ್ನು ಮೈಸೂರು ವಿಶ್ವವಿದ್ಯಾನಿಲಯದ ಬೋರ್ಡ್ ಆಫ್ ಅಪಾಯಿಂಟ್‌ಮೆಂಟ್ ಶಾಸನಕ್ಕೆ ನನ್ನ ತಿದ್ದುಪಡಿಯ ಪ್ರಕಾರ ಲಗತ್ತು ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಆಗ ಏನಾಗುತ್ತದೆ ಎಂದರೆ ಈ ಅಮೆಂಡ್‌ಮೆಂಟ್ ಬಂದರೆ ಬೆಂಗಳೂರು ವಿಶ್ವವಿದ್ಯಾನಿಲಯದ ಒಂದು ಬೋರ್ಡ್ ಆಫ್ ಅಪಾಯಿಂಟ್‌ಮೆಂಟ್‌ನಲ್ಲಿ ನಜ್‌ಕ್ಷಾನ್ (5) ಹೇಗಿದೆಯೋ ಅದೇ ಕ್ಲಾಜನ್ನು ಮೈಸೂರು ಯೂನಿವರ್ಸಿಟಿ ಆಕ್ಟಿನ 26ನೇ ಉಪ ವಿಧಿಗೆ ಸೇರಿಕೊಳ್ಳುತ್ತದೆ. ಬೋರ್ಡ್ ಆಫ್ ಅಪಾಯಿಂಟ್‌ಮೆಂಟಿನವರು ತಮ್ಮ ರೆಕಮೆಂಡೇಷನ್‌ಗಳನ್ನು ಸಿಂಡೀಕೇಟಿಗೆ ಕಳುಹಿಸತಕ್ಕದ್ದು, ಸಿಂಡಿಕೇಟಿನವರು ಅದನ್ನು ಕೂಲಂಕಷವಾಗಿ ಚರ್ಚೆ ಮಾಡಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸತಕ್ಕದ್ದು. ಈ ಎರಡು ಅಭಿಪ್ರಾಯಗಳನ್ನು ತರುವಾಯ ಛಾನ್ಸಲರಿಗೆ ಕಳುಹಿಸಿದರೆ ಒಂದು ಮಾರ್ಗದಲ್ಲಿ ನ್ಯಾಯ ದೊರಕಬಹುದು ಎನ್ನುವ ದೃಷ್ಟಿಯಿಂದ ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿರುವ ಬೋರ್ಡ್ ಆಫ್ ಅಪಾಯಿಂಟ್‌ಮೆಂಟಿನ ಉಪ ವಿಭಾಗ 5 ನ್ನು ಮೈಸೂರು ವಿಶ್ವವಿದ್ಯಾನಿಲಯದ ಬೋರ್ಡ್ ಆಫ್ ಅಪಾಯಿಂಟ್‌ಮೆಂಟಿನ ಉಪ ವಿಭಾಗಕ್ಕೆ ನನ್ನ ತಿದ್ದುಪಡಿಯ ಮೂಲಕ ಸೇರಿಸುವುದಕ್ಕೆ ನಾನು ಪ್ರಯತ್ನ ಪಟ್ಟಿದ್ದೇನೆ. ಈ ರೀತಿ ಮಾಡುವುದಕ್ಕೆ ನಾನು ಏತಕ್ಕೆ ಪ್ರಯತ್ನ ಮಾಡಿದೆ ಎಂದರೆ ಬೆಂಗಳೂರು ವಿಶ್ವವಿದ್ಯಾನಿಲಯದ ಶಾಸನದಲ್ಲಿ ಇಂಟರ್ ಮೀಡಿಯರಿ ಸ್ಟೇಜ್ ಕಲ್ಪನೆ ಮಾಡಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದ ಶಾಸನದಲ್ಲಿ ಇಂಟರ್ ಮೀಡಿಯರಿ ಸ್ಟೇಜ್ ಇಲ್ಲ. ಇಲ್ಲಿ ಬೋರ್ಡ್ ಆಫ್ ಅಪಾಯಿಂಟ್‌ಮೆಂಟಿನವರು ಮಾಡಿದಂತಹ ಸಿಫಾರಸ್ಸುಗಳು ನೇರವಾಗಿ ಛಾನ್ಸಲರಿಗೆ ಹೋಗುತ್ತವೆ. ಬೆಂಗಳೂರು ವಿಶ್ವವಿದ್ಯಾನಿಲಯದ ಶಾಸನದಲ್ಲಿ ಉಪ ವಿಭಾಗ 5 ರಲ್ಲಿ ಇಂಟರ್‌ಮೀಡಿಯರಿ ಸ್ಟೇಜ್ ಇದೆ. ಆದ್ದರಿಂದ ಅದನ್ನು ಮೈಸೂರು ವಿಶ್ವವಿದ್ಯಾನಿಲಯದ ಉಪ ವಿಭಾಗಕ್ಕೆ ಸೇರಿಸಿದರೆ ಸ್ವಲ್ಪ ಬಿಗಿ ಇರುತ್ತದೆ. ಹಿಡಿತ ಇರುತ್ತದೆ. 13 ಜನ ಇರುವ ನಂಸ್ಥೆ ಬೋರ್ಡ್ ಆಫ್ ಅಪಾಯಿಂಟ್‌ಮೆಂಟಿನವರು ಕೊಡತಕ್ಕ ಸಿಫಾರಸ್ಸುಗಳನ್ನು ಸಿಂಡಿಕೇಟಿನವರು ಡೀಟೈಲಾಗಿ ಸ್ಕ್ರುಟಿನಿ ಮಾಡಿ ತರುವಾಯ ಅವರ ಅಭಿಪ್ರಾಯಗಳನ್ನೂ ಸೇರಿಸಿ ಅದನ್ನು ಛಾನ್ಸಲರಿಗೆ ಕಳುಹಿಸಿದರೆ ಒಂದು ರೀತಿಯಲ್ಲಿ ನ್ಯಾಯ ದೊರಕಬಹುದು ಎನ್ನುವ ದೃಷ್ಟಿಯಿಂದ ನಾನು ಇದನ್ನು ತಂದಿದ್ದೇನೆ.

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಅಗ್ರಿಕಲ್ಚರಲ್ ಯೂನಿವರ್ಸಿಟಿಯಲ್ಲಿ ಮಾನ್ಯ ಸದಸ್ಯರು ಹೇಳುವ ಪದ್ಧತಿ ಇದೆ. ಆದರೂ ಸಹ ಅಲ್ಲಿಯೂ ಬೋರ್ಡ್ ಆಫ್ ಅಪಾಯಿಂಟ್‌ಮೆಂಟಿನವರ ಮೇಲೆ ದೋಷಾರೋಪಣೆಗಳು ಇವೆ.

ಶ್ರೀ ಎಲ್. ಶ್ರೀಕಂಠಯ್ಯ.—ನಮ್ಮ ಕರ್ತವ್ಯ ಏನು ಎಂದರೆ ಸಾಧ್ಯವಾದ ಮಟ್ಟಿಗೆ ಇಂಟರ್ಮೀಡಿಯರಿ ಸ್ಟೇಜಿನಲ್ಲಿ ಚೆಕ್ಸ್ ಇಟ್ಟು ಸಾಧ್ಯವಾದ ಮಟ್ಟಿಗೆ ಅದನ್ನು ಸಮರ್ಪಕವಾಗಿ ಮಾಡುವ ಉದ್ದೇಶದಿಂದ ನಾನು ಈ ತಿದ್ದುಪಡಿಯನ್ನು ತಂದಿದ್ದೇನೆಯೇ ಹೊರತು ಬೋರ್ಡ್ ಆಫ್ ಅಪಾಯಿಂಟ್‌ಮೆಂಟಿನವರ ಮೇಲೆ ದೋಷಾರೋಪಣೆ ಬಾರದೆ ಇಗುವ ಹಾಗೆ ಮಾಡುವುದಕ್ಕೆ ಸಾಧ್ಯವಿಲ್ಲ. ಆದರೆ ಪಬ್ಲಿಕ್ ಸರ್ವೀಸ್ ಕಮಿಷನ್ನಿಗೆ ವಿಶ್ವವಿದ್ಯಾನಿಲಯದ ನೇಮಕಗಳ ವ್ಯಾಪ್ತಿಯನ್ನು ಕೊಡುವುದು ಸಾಧುವಲ್ಲ. ಈಗ ಇದ್ದದ್ದನ್ನು ಸಾಧ್ಯವಾದ ಮಟ್ಟಿಗೆ ಉತ್ತಮಪಡಿಸುವ ಉದ್ದೇಶದಿಂದ ಅಗ್ರಿಕಲ್‌ಚರಲ್ ವಿಶ್ವವಿದ್ಯಾನಿಲಯದಲ್ಲಿ ಬೋರ್ಡ್ ಆಫ್ ಅಪಾಯಿಂಟ್‌ಮೆಂಟಿನ ಉಪ ವಿಭಾಗ ಇರುವ ಹಾಗೆ, ಬೆಂಗಳೂರು ವಿಶ್ವವಿದ್ಯಾನಿಲಯದ ಶಾಸನದಲ್ಲಿ ಇಂಟರ್‌ಮೀಡಿಯರಿ ಸ್ಟೇಜ್ ಇರುವ ಹಾಗೆ ಮೈಸೂರು ವಿಶ್ವವಿದ್ಯಾನಿಲಯದ ಶಾಸನದಲ್ಲಿ ಆ ಇಂಟರ್‌ಮೀಡಿಯರಿ ಸ್ಟೇಜನ್ನು ಸೇರಿಸಿದರೆ ಒಳ್ಳೆಯದು. ಯಾವ ಅಪಾಯಿಂಟ್‌ಮೆಂಟ್‌ಗಳು ದೋಷಾರೋಪಣೆಯಿಂದ ವಿಮುಕ್ತವಾಗುವುದಿಲ್ಲ; ಆದರೂ ಸಹ ಅವುಗಳ ಬಗ್ಗೆ ಸಾಧ್ಯವಾದ ಮಟ್ಟಿಗೆ ಚೆಕ್ಸ್ ಇದ್ದರೆ ಒಳ್ಳೆಯದು. ಈ ದೃಷ್ಟಿಯಿಂದ ನಾನು ತಂದಿರತಕ್ಕ ತಿದ್ದುಪಡಿ ಅವಶ್ಯಕವಾಗಿ ಬೇಕಾಗಿದೆ. ಈ ಸಭೆಯವರು ಬಹಳ ವಿವೇಚನೆ ಮಾಡಿ ಇದನ್ನು ಒಪ್ಪಬೇಕು. ಬೆಂಗಳೂರು ವಿಶ್ವವಿದ್ಯಾನಿಲಯದ ಬೋರ್ಡ್ ಆಫ್ ಅಪಾಯಿಂಟ್‌ಮೆಂಟ್ ಉಪ ವಿಭಾಗ ಇರುವ ಹಾಗೆ ಮತ್ತು ಅಗ್ರಿಕಲ್‌ಚರಲ್ ವಿಶ್ವವಿದ್ಯಾನಿಲಯದ ಬೋರ್ಡ್ ಅಪಾಯಿಂಟ್‌ಮೆಂಟ್ ಉಪ ವಿಭಾಗ ಇರುವ ಹಾಗೆ ಮೈಸೂರು ವಿಶ್ವವಿದ್ಯಾನಿಲಯದ ಶಾಸನದ ಉಪವಿಭಾಗದಲ್ಲಿ ಸೇರಬೇಕು. 1956 ನೇ ಇಸವಿಗಿಂತ ಮುಂಚೆ ಇದ್ದಂತಹ ಕಾಯಿದೆಯಲ್ಲಿ ಅಪಾಯಿಂಟ್‌ಮೆಂಟ್ ಅಧಿಕಾರ ಪೂರ್ಣವಾಗಿ ಕೌನ್ಸಿಲ್ಲಗೆ ಇತ್ತು ಎಂದು ಕಾಣುತ್ತದೆ. ಅದು ಭದ್ರವಾಗಿಲ್ಲ, ಅಲ್ಲಿ ಅನ್ಯಾಯ ನಡೆಯುತ್ತದೆ ಎಂದು ಅದು ನೇರವಾಗಿ ಸರಕಾರದಿಂದ ವಿಮುಕ್ತವಾಗಿ ಬೋರ್ಡ್ ಆಫ್ ಅಪಾಯಿಂಟ್‌ಮೆಂಟ್ 1956 ನೇ ಇಸವಿಯಲ್ಲಿ ಬಂತು. 1956 ನೇ ಇಸವಿಯ ನಂತರ ಅಗ್ರಿಕಲ್‌ಚರರ್ ವಿಶ್ವವಿದ್ಯಾನಿಲಯ ಮತ್ತು ಬೆಂಗಳೂರು ವಿಶ್ವವಿದ್ಯಾನಿಲಯಗಳು ಸ್ಥಾಪನೆಯಾದವು.

(ಶ್ರೀ ಎಲ್. ಶ್ರೀಕಂಠಯ್ಯ)

ಅವುಗಳು ಸ್ಥಾಪನೆಯಾದ ಮೇಲೆ ಆ ಎರಡು ವಿಶ್ವವಿದ್ಯಾನಿಲಯಗಳಲ್ಲಿಯೂ ಬೋರ್ಡ್ ಆಫ್ ಅಪಾಯಿಂಟ್‌ಮೆಂಟಿನವರು ಮಾಡಿದಂತಹ ನೇಮಕಗಳನ್ನು ಪರಿಶೀಲನೆ ಮಾಡುವ ಉದ್ದೇಶದಿಂದ ಇಂಟರ್‌ಮೀಡಿಯರಿ ಸ್ಟೇಜಿನಲ್ಲಿ ಸಿಂಡಿಕೇಟ್ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕೆ ಅವಕಾಶ ಇರಬೇಕು ಎನ್ನುವ ದೃಷ್ಟಿಯಿಂದ ಅದನ್ನು ಮಾಡಿದ್ದಾರೆ. ಅವು ದೊಡ್ಡ ವಿಶ್ವವಿದ್ಯಾನಿಲಯಗಳು ಅವುಗಳ ಶಾಸನ ಉನ್ನತ ಮಟ್ಟದಲ್ಲಿರುತ್ತದೆ. ಆದ್ದರಿಂದ ಅದೇ ಅವಕಾಶವನ್ನು ಮೈನೂರು ವಿಶ್ವವಿದ್ಯಾನಿಲಯಕ್ಕೂ ಒದಗಿಸಿ ಕೊಟ್ಟು, ನಾನು ನನ್ನ ತಿದ್ದುಪಡಿಯಲ್ಲಿ ತಂದಿರುವ ಹಾಗೆ ಅದನ್ನು ಮೈನೂರು ವಿಶ್ವವಿದ್ಯಾನಿಲಯದ ಆಕ್ಟಿನಲ್ಲಿ ಅಳವಡಿಸಬೇಕು. ಆ ರೀತಿ ಮಾಡಿದರೆ ಅಲ್ಲಿ ಉತ್ತಮವಾದ ಅಪಾಯಿಂಟ್‌ಮೆಂಟ್‌ಗಳಾಗುತ್ತವೆಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಚ್. ಬಿ. ಜ್ವಾಲನಯ್ಯ (ಹಾನಗಲ್).—ಮಾನ್ಯ ಅಧ್ಯಕ್ಷರೇ, ನನ್ಮಾನ್ಯ ಪ್ರೊಫೆಸರ್ ಶ್ರೀಕಂಠಯ್ಯನವರು ಸೂಚಿಸಿರತಕ್ಕಂತಹ ಮೈನೂರು ಯೂನಿವರ್ಸಿಟಿ ಅಮೆಂಡ್‌ಮೆಂಟ್ ಬಿಲ್ ಏನಿದೆ, ಅದನ್ನು ನಾನು ಸಮರ್ಥನೆ ಮಾಡುತ್ತಾ ಎರಡು ಮಾತುಗಳನ್ನು ಹೇಳಬಯಸುತ್ತೇನೆ. ಈಗಿರುವಂತಹ ಒಂದು ವ್ಯವಸ್ಥೆಯಲ್ಲಿ ಅನೇಕ ಅವ್ಯವಹಾರಗಳಿಗೆ ಅವಕಾಶ ಇದೆ. ಈ ಬೋರ್ಡ್ ಆಫ್ ಅಪಾಯಿಂಟ್‌ಮೆಂಟ್ಸ್ ಏನಿದೆ, ಅಲ್ಲಿ ಅನಾಚಾರಕ್ಕೆ, ಅವ್ಯವಹಾರಕ್ಕೆ ಅವಕಾಶ ಇದೆ. ಅದನ್ನು ತೆಗೆದುಹಾಕುವುದಕ್ಕೆ ಈ ತಿದ್ದುಪಡಿಯನ್ನು ತಂದಿದ್ದಾರೆ; ಅದು ಸರಿಯಾದುದೆಂದು ಹೇಳುತ್ತೇನೆ. ಅವರು ಸಲಹೆ ಮಾಡಿರುವಂತೆ 23 ನೇ ಸೆಕ್ಷನಿನಲ್ಲಿ ಪ್ರಿನ್ಸಿಪಲ್ ಆಕ್ಟಿಗೆ ಏನು ಅಮೆಂಡ್‌ಮೆಂಟ್ ಸೂಚಿಸಿದ್ದಾರೆ, ಇದರ ಪ್ರಕಾರ ಹುದ್ದೆಗಳನ್ನು ಭರ್ತಿ ಮಾಡುವ ಸಂದರ್ಭದಲ್ಲಿ ಬೋರ್ಡ್ ಆಫ್ ಅಪಾಯಿಂಟ್‌ಮೆಂಟಿನವರು ಏನು ಮಾಡುತ್ತಾರೆ, ಅದನ್ನು ಸಿಂಡಿಕೇಟಿಗೆ ಪರಿಶೀಲಿಸಲು ಅವಕಾಶ ಕೊಡಿ ಎಂದು ಕೇಳುತ್ತಿದ್ದಾರೆ. ಇದು ಹೊಸದೇನಲ್ಲ. ಯಾವ ಹುದ್ದೆಗೆ ಆರಿಸಬೇಕೋ, ಆ ಹುದ್ದೆಗೆ ಒಮ್ಮೆ ಆರಿಸಿದ ಮೇಲೆ ಮತ್ತೆ ಬದಲಾವಣೆ ಮಾಡುವುದಕ್ಕಾಗುವುದಿಲ್ಲ. ಆರಿಸುವಂತಹವರು ಎಷ್ಟು ಎಚ್ಚರವನ್ನು ತೆಗೆದುಕೊಂಡರೂ ಒಳ್ಳೆಯದು. ಆ ದೃಷ್ಟಿಯಿಂದ ಬೋರ್ಡ್ ಆಫ್ ಅಪಾಯಿಂಟ್‌ಮೆಂಟ್ ಏನು ಒಂದು ಸಲಹೆ ಕೊಡುತ್ತಾರೆ, ಆ ಸಲಹೆಯನ್ನು ಮತ್ತೆ ಸಿಂಡಿಕೇಟ್ ಪರಿಶೀಲಿಸುವುದರಲ್ಲಿ ಅತ್ಯುತ್ತಮವಾದ ಫಲಿತಾಂಶ ಬರಬಹುದೆಂದು ತಿಳಿಸುತ್ತೇನೆ. ಬೋರ್ಡ್ ಆಫ್ ಅಪಾಯಿಂಟ್‌ನವರ ಸಲಹೆ ನಿಜವಾಗಿಯೂ ಸರಿಯಾಗಿದ್ದರೆ ಅದನ್ನು ಸಿಂಡಿಕೇಟ್‌ನವರು ಚಾನ್ಸಲರಿಗೆ ಕಳುಹಿಸಿಕೊಡಬಹುದು ಮತ್ತು ಉಮೇದ್ವಾರರು ಸರಿಯಾದ ಅರ್ಹತೆ ಪಡೆದಿದ್ದಾರೆಂದರೆ, ಅವರನ್ನು ನೇಮಕ ಮಾಡಿಕೊಳ್ಳಬಹುದು.

> "If the Syndicate considers that the recommendations of the Board of Appointments are not accentable, it shall record its reasons and submit the case to the Chancellor for orders and the orders of the Chancellor thereon shall be final."

ಈ ಬೋರ್ಡ್ ಆಫ್ ಅಪಾಯಿಂಟ್‌ಮೆಂಟ್ ಈಗಿರುವ ದೃಷ್ಟಿಯಲ್ಲಿ ಬಹಳ ಸಂಕುಚಿತ ದೃಷ್ಟಿಯಲ್ಲಿದೆ. ಶ್ರೀ ಶ್ರೀಕಂಠಯ್ಯನವರು ಸಲಹೆ ಮಾಡಿರುವ ಪ್ರಕಾರ ಇದು ಸರಿಯಾಗಿದೆ ಎಂದು ನನ್ನ ಅಭಿಪ್ರಾಯ. ಮಾನ್ಯ ಪ್ರೊಫೆಸರ್ ಶ್ರೀಕಂಠಯ್ಯನವರು ಈ ಕ್ಷೇತ್ರದಲ್ಲಿ ನಾನಾ ರೀತಿಯ ಅನುಭವ ಪಡೆದು ಅಲ್ಲಿಯ ಲೋಪದೋಷಗಳನ್ನು ಕಂಡು ಈ ತಿದ್ದುಪಡಿಯನ್ನು ತಂದಿದ್ದಾರೆ. ಹಿರಿಯ ಹುದ್ದೆಗಳಿಗೆ ಆರಿಸುವಾಗ, ಈ ರೀತಿ ಮಾಡುವುದರಿಂದ ಸರಿಯಾಗಿ ನೋಡಿಕೊಂಡು ನೇಮಕ ಮಾಡಲು ಅವಕಾಶ ಇದೆ. ಇದನ್ನು ಮಾನ್ಯ ಸೋಗಿಯವರು ಬೆಂಗಳೂರು ಮತ್ತು ಅಗ್ರಿಕಲ್ಚರಲ್ ಯೂನಿವರ್ಸಿಟಿಯಲ್ಲಿ ಮಾಡಿದ್ದಾರೆ. ಸರ್ಕಾರ ಇದನ್ನು ಒಪ್ಪುವುದಿಲ್ಲ ಎನ್ನುವ ಮಾತನ್ನು ಹೇಳುವುದಾದರೆ, ಬೆಂಗಳೂರು ಯೂನಿವರ್ಸಿಟಿಯಲ್ಲಿ ಮತ್ತು ಅಗ್ರಿಕಲ್ಚರಲ್ ಯೂನಿವರ್ಸಿಟಿಯಲ್ಲಿ ಮಾಡಿರುವ ವ್ಯವಸ್ಥೆ ತಪ್ಪು ಎಂದು ಹೇಳಿದ ಹಾಗೆ ಆಗುತ್ತದೆ. ಆದ್ದರಿಂದ ಈ ತಿದ್ದುಪಡಿಗೆ ಸರ್ಕಾರ ಬೆಂಬಲ ಕೊಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Mr. DEPUTY SPEAKER.—The House will now adjourn and meet on Monday, the 2nd February 1970, at 1-00 P.M.

The House adjourned at Five Minutes past One of the Clock to meet again at One of the Clock on Monday, the 2nd February 1970.

WD 14637—GPB—600—21-7-1970